ಹೇಳುತ್ತಾರೆ. ಮೇಲ್ನೋಟಕ್ಕೆ ಮರಳಿನ ಮೇಲ್ಮೈ ಸಮನಾಗಿಯೇ ಇರುತ್ತದೆ. ಆದರೆ, ಅದರ ಕೆಳಗೆ ಅತಿಯಾದ ಆಳವಿರುತ್ತದೆ- ಅಲ್ಲಿ ಕಾಲಿಡುತ್ತಲೇ ಮನುಷ್ಯ ಅದರಲ್ಲಿ ಕಳೆದು ಹೋಗುತ್ತಾನೆ.

ಅಬ್ಬಿಯ ಶವ ಮತ್ತು ಹಾರ್ಮೋನಿಯಂ ಹುಡುಕಲು ತುಂಬಾ ಪ್ರಯತ್ನಿಸಲಾಯಿತು. ಮಲಂಗಾ ಎಂಬ ಪ್ರಸಿದ್ಧ ಅಂಬಿಗ ಮುಳುಗುಹಾಕಿ ಹುಡುಕಾಡಿದ. ಆದರೆ, ಎಲ್ಲವೂ ವ್ಯರ್ಥವಾಯಿತು. ಯಾವುದರ ಸುಳಿವೂ ಸಿಗಲಿಲ್ಲ.

ಅಬ್ಬಿಯ ಹೆಂಡತಿ ಫಿರೋಜಾ ಇನ್ನೂ ಯೌವನಾವಸ್ಥೆಯಲ್ಲಿದ್ದಳು. ಅಬ್ಬಿ ಸತ್ತ ನಂತರ ಫಿರೋಜಾಳ ತಲೆಯ ಮೇಲೆ ಕಷ್ಟಗಳ ಸರಮಾಲೆಯೇ ಬಿದ್ದವು. ಅವಳು ಮನೆ-ಮನೆಗೆ ಹೋಗಿ ಅಕ್ಕಿ-ಬೇಳೆಯನ್ನು ಸ್ವಚ್ಛ ಮಾಡಿಕೊಡಲು ಆರಂಭಿಸಿದಳು. ಹೊಲಗಳಲ್ಲಿ ಕೂಲಿ ಕೆಲಸ ಮಾಡಲಾರಂಭಿಸಿದಳು. ತೋಟಗಳನ್ನು ಕಾಯುವ ಕೆಲಸ ಮಾಡಿದಳು; ಆಗ ಅವಳಿಗೆ ಎರಡು ಹೊತ್ತಿನ ಕೂಳು ಸಿಗುತ್ತಿತ್ತು. ಹಗಲಿಡೀ ಭತ್ತ ಕುಟ್ಟುತ್ತಿದ್ದಳು. ಸೋನ್ ನದಿಯಿಂದ ಕೊಡಗಳಲ್ಲಿ ನೀರು ತುಂಬಿ-ತುಂಬಿ ತರುತ್ತಿದ್ದಳು. ಮನೆಯ ಕೆಲಸಗಳನ್ನು ಮಾಡಬೇಕಾಗುತ್ತಿತ್ತು. ರಾತ್ರಿ ವೇಳೆಯಲ್ಲಿ ಹೊಲಗಳನ್ನು ಕಾಯಲು ಹೋಗುತ್ತಿದ್ದಳು. ಮನೆಯಲ್ಲಿದ್ದ ಒಂದು ಕುರಿಯನ್ನು ಅವಳೇ ನೋಡಿಕೊಳ್ಳಬೇಕಿತ್ತು. ಇಷ್ಟೆಲ್ಲಾ ಕೆಲಸಗಳ ನಡುವೆ ಟೇಪಚೂ ಅವಳ ಹೊಟ್ಟೆಯಲ್ಲಿ, ಒಂದು ಹಳೆಯ ಸೀರೆಯಲ್ಲಿ ಕಟ್ಟು ಹಾಕಿದ ಬಾವಲಿಯಂತೆ ನೇತಾಡುತ್ತಿದ್ದ.

ಫಿರೋಜಾ ಒಂಟಿಯಾಗಿರುವುದನ್ನು ಕಂಡ ಹಳ್ಳಿಯ ಅನೇಕ ಶ್ರೀಮಂತ ಮನೆತನದ ಹುಡುಗರು ಅವಳನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದರು. ಆದರೆ, ಟೇಪಚೂ ಪ್ರತಿ ಬಾರಿಯೂ ತನ್ನ ತಾಯಿಯ ಬಳಿ ಕವಚದಂತಿರುತ್ತಿದ್ದ. ಇನ್ನೊಂದು ಸಂಗತಿಯೆಂದರೆ ಅವನು ಫಿರೋಜಾಳ ಯೌವನಕ್ಕೆ ಸಗಣಿಯ ಹಾಗೆ ಮೆತ್ತಿಕೊಂಡಿರುವಂತೆ ತೋರುತ್ತಿದ್ದ. ಒಣಗಿದ ಸುಕ್ಕು ಕೈ-ಕಾಲುಗಳು, ಕುಂಬಳ ಕಾಯಿಯಂತೆ ಉಬ್ಬಿದ ಹೊಟ್ಟೆ, ಕುರುಗಳಿಂದಾವೃತಗೊಂಡ ಶರೀರದ ಟೇಪಚೂವನ್ನು ನೋಡಿದ ಜನ, ಅವನು ಸಾಯುವುದನ್ನೇ ಕಾಯುತ್ತಿದ್ದರು. ಒಂದು ವರ್ಷ ಕಳೆಯುವುದರೊಳಗೆ ಮೈಮುರಿಯುವ ಕೆಲಸಗಳು ಫಿರೋಜಾಳ ಶರೀರವನ್ನು ಹಿಂಡಿ ಹಿಪ್ಪೆ ಮಾಡಿತು. ಅವಳು ವೃದ್ಧೆಯಾದಳು. ಅವಳ ತಲೆಕೂದಲುಗಳು ಗಂಟಿಕ್ಕಿಕೊಂಡು, ಕೊಳಕಾದವು. ಅವಳು ಉಟ್ಟ ಬಟ್ಟೆಗಳಿಂದ ಕೆಟ್ಟ ವಾಸನೆ ಬರುತ್ತಿತ್ತು. ಅವಳು ಒಂದೇ ಸಮನೆ ದುಡಿಯುತ್ತಿದ್ದಳು, ಅವಳನ್ನು ನೋಡಿ ಜನರಿಗೆ ಜಿಗುಪ್ಸೆಯುಂಟಾಗುತ್ತಿತ್ತು.

ಏಳೆಂಟು ವರ್ಷಕ್ಕೆ ಕಾಲಿಟ್ಟಾಗ, ಅವನ ಬಗ್ಗೆ ಹಳ್ಳಿ ಜನರಲ್ಲಿ ಆಸಕ್ತಿ ಹುಟ್ಟಿತು.

ನಮ್ಮ ಹಳ್ಳಿಯಿಂದ ಹೊರಗೆ, ದೂರದವರೆಗೆ ವಿಸ್ತಾರಗೊಂಡ ದವಸ-ಧಾನ್ಯಗಳ ಹೊಲಗಳ ಆಚೆಗೆ ಮಾವಿನ ಒಂದು ದಟ್ಟವಾದ ತೋಟವಿತ್ತು. ಹಳ್ಳಿಯ ಕುಲೀನ ರೈತರ ವಂಶಜರು, ಠಾಕೂರರು-ಬ್ರಾಹ್ಮಣರು, ಕುಲೀನ ಕನ್ಯೆಯರು ಅದೇ ತೋಟದ ಅಂಧಕಾರದ ಮೂಲೆಯಲ್ಲಿ ತಮ್ಮ-ತಮ್ಮ ಗೆಳೆಯರನ್ನು ಸಂಧಿಸುತ್ತಿದ್ದರೆಂದು ಹೇಳಲಾಗುತ್ತಿತ್ತು. ಪ್ರತಿ ಮೂರ್‍ನಾಲ್ಕು ವರ್ಷಗಳಿಗೊಮ್ಮೆ ಆ ತೋಟದ ಮೂಲೆಯೊಂದರಲ್ಲಿ ಬೆಳ್ಳಂಬೆಳಗ್ಗೆ ಆಗತಾನೇ ಜನಿಸಿದ ಶಿಶು ರೋದಿಸುತ್ತಾ ಅನಾಥವಾಗಿ ಬಿದ್ದಿರುತ್ತಿತ್ತು. ಇಂಥ ಶಿಶುಗಳಲ್ಲಿ ಬಹುತೇಕ ಶಿಶುಗಳು ಸುಂದರವಾಗಿದ್ದು, ಬಿಳುಪಾಗಿದ್ದು, ಆರೋಗ್ಯವಾಗಿರುತ್ತಿದ್ದವು.

ಖಂಡಿತವಾಗಿಯೂ ಆ ಶಿಶುಗಳನ್ನು ಹಳ್ಳಿಯ ಆದಿವಾಸಿ ಕೋಲ್-ಗೋಂಡೋಗಳ ಮಕ್ಕಳೆಂದು ಹೇಳಲು ಸಾಧ್ಯವಿರಲಿಲ್ಲ. ಪ್ರತಿ ಬಾರಿಯೂ ಪೊಲೀಸರು ಬರುತ್ತಿದ್ದರು. ಪೊಲೀಸ್ ಇನ್‌ಸ್ಪೆಕ್ಟರ್ ಠಾಕೂರರ ಮನೆಯಲ್ಲಿ ಕೂತಿರುತ್ತಿದ್ದ. ಎಲ್ಲಾ ಪೊಲೀಸರಿಗೆ ಅಲ್ಲಿ ಅಡುಗೆ ಸಿದ್ಧವಾಗುತ್ತಿತ್ತು. ಹಳ್ಳಿಗಳಿಂದ ಕೋಳಿಗಳನ್ನು ಹಿಡಿಸಲಾಗುತ್ತಿತ್ತು. ಮದ್ಯ ಬರುತ್ತಿತ್ತು. ಸಂಜೆ ವೇಳೆಗೆ ಬೀಡಾ ಜಗಿಯುತ್ತಾ, ಮುಗುಳ್ನಗುತ್ತಾ ಹಾಗೂ ಹಳ್ಳಿಯ ಯುವತಿಯರೊಂದಿಗೆ ತಮಾಷೆ ಮಾಡುತ್ತಾ ಪೊಲೀಸರು ಮರಳಿ ಹೋಗುತ್ತಿದ್ದರು. ವಿಷಯ ಸದಾ ಹೀಗೆಯೇ ಕೊನೆಗೊಳ್ಳುತ್ತಿತ್ತು.

ಈ ತೋಟದ ಹಳೆಯ ಹೆಸರು 'ಮುಖಂಡರ ತೋಟ' ಎಂದಿತ್ತು. ಅದೆಷ್ಟೋ ವರ್ಷಗಳ ಹಿಂದೆ ಚೌಧರಿ ಬಾಲಕಿಶನ್ ಸಿಂಗ್‌ರು ಈ ತೋಟವನ್ನು ನಿರ್ಮಿಸಿದ್ದರು. ಖಾಲಿ ಬಿದ್ದಿದ್ದ ಸರ್ಕಾರಿ ಭೂಮಿಯನ್ನು ಕ್ರಮೇಣ ತಮ್ಮ ವಶಕ್ಕೆ ತೆಗೆದುಕೊಳ್ಳುವುದು ಇದರ